(ಸಾಕ್ಷಿಯನ್ನು ದಿಃ 8-6-2016 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಿ ಮುಂದುವರಿದ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು. )

**ಮುಂದುವರಿದ ಮುಖ್ಯ ವಿಚಾರಣೆ ಃ ಶ್ರೀ ಜಿ ಟಿ ಎನ್ ವಕೀಲರಿಂದ**

ನನ್ನ ಪ್ರಮಾಣ ಪತ್ರದ ಮಜಕೂರುಗಳನ್ನು ಸಾಬೀತುಪಡಿಸಲು ಈ ಕೆಳಕಂಡ ದಾಖಲಾತಿಗಳನ್ನು ಹಾಜರಪಡಿಸುತ್ತಿದ್ದೇನೆ.

ದಾವಾ ಸ್ವತ್ತಿಗೆ ಸಂಬಂಧಪಟ್ಟ ಆರ್ ಟಿ ಸಿ ಯನ್ನು ನಿ.ಪಿ.1 ಕ್ಕೆ, ಮ್ಯುಟೇಶನ ರಜಿಸ್ಟರ ಎಕ್ಸಟ್ರಾಕ್ಟನ್ನು ನಿ.ಪಿ.2 ಕ್ಕೆ, ಪ್ರತಿವಾದಿಯು ನನ್ನ ಹೆಸರಿಗೆ ಬರೆದುಕೊಟ್ಟಿರುವ ಮೂಲ ಚೆಕ್ಕನ್ನು ನಿ.ಪಿ.3 ಕ್ಕೆ, ಪ್ರತಿವಾದಿಗೆ ನೀಡಿದ ಲೀಗಲ್ ನೋಟಿಸಿನ ಕಛೇರಿ ಪ್ರತಿಯನ್ನು ನಿ.ಪಿ.4 ಕ್ಕೆ, ಪ್ರತಿವಾದಿಯು ಸದ್ರಿ ನೋಟೀಸಿಗೆ ನೀಡಿರುವ ಜವಾಬು ನೋಟಿಸನ್ನು ನಿ.ಪಿ.5 ಕ್ಕೆ, ಸಂಬಂಧಪಟ್ಟ ಪೊಲೀಸರು ನೀಡಿರುವ ಸ್ವೀಕೃತಿ ಮತ್ತು ಹಿಂಬರಹವನ್ನು ನಿ.ಪಿ.6 ಮತ್ತು ನಿ.ಪಿ.7 ಕ್ಕೆ ನಿಶಾನಿಸಲಾಯಿತು. ಪ್ರತಿವಾದಿ ನನ್ನ ಹೆಸರಿಗೆ ಬರೆದುಕೊಟ್ಟಿರುವ ಕ್ರಯದ ಕರಾರು ಪತ್ರವನ್ನು

ಹಾಜರಪಡಿಸಿದ್ದೇನೆ. ***( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸದ್ರಿ ದಾಖಲೆಯನ್ನು ನಿ ಶಾನಿಸಲು ಆಕ್ಷೇಪ ವ್ಯಕ್ತಪಡಿಸಿದ್ದು, ಆ ಬಗ್ಗೆ ವಾದ - ವಿವಾದ ಆಲಿಸಲು ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)***

**(**ತೆರೆದ ನ್ಯಾ.ದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.